ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ

ಸಿಸಿ ಸಂಃ 606/2016

| | | |
|---|---|---|
| ಸಾಕ್ಷಿಯ ಹೆಸರುಃ | ವಿಘ್ನೇಶ | ಫ್ರಾಸಾಃಃ 1 |
| ತಂದೆ/ಗಂಡನ ಹೆಸರುಃ | ಪುಟ್ಟೇಗೌಡ | ಚಾಸಾಃಃ 1 |
| ವಯಸ್ಸುಃ | 27 ವರ್ಷ | ಪ್ರಮಾಣೀಕರಿಸಿದ ದಿಃ 24-02-2021 |
| ಉದ್ಯೋಗಃ | ಕೃಷಿ | |
| ವಾಸಸ್ಥಳಃ | ಮುತ್ತೂರು, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಸಸಅ ರಿಂದಃ

ಆರೋಪಿತರು ನನಗೆ ಗೊತ್ತಿಲ್ಲ. ನನ್ನ ಮತ್ತು ಅವರ ನಡುವೆ ಯಾವುದೇ ಗಲಾಟೆ ನಡೆದಿಲ್ಲ. ನನಗೆ ಆರೋಪಿತರು ಯಾವುದೇ ಹಲ್ಲೆ ಮಾಡಿಲ್ಲ. ನಾನು ಅವರ ವಿರುದ್ಧ ಪೊಲೀಸರಿಗೆ ಯಾವುದೇ ದೂರು ಕೊಟ್ಟಿಲ್ಲ. ಪೊಲೀಸರು ಯಾವುದೇ ಸ್ಥಳಕ್ಕೆ ಬಂದು, ಮಹಜರ್ ಮಾಡಿ ಯಾವುದೇ ಸ್ವತ್ತು ಜಪ್ತುಪಡಿಸಿಕೊಂಡಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ. ಈಗ ನನಗೆ ಒಂದು ದಾಖಲೆ ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆ ಹೇಳಿಕೆ ದೂರು ಆಗಿದ್ದು, ಅದನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು. ಈಗ ನನಗೆ ಮತ್ತೊಂದು ದಾಖಲೆ ತೋರಿಸುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆ ಪಂಚನಾಮೆ ಆಗಿದ್ದು, ಅದನ್ನು ನಿಪಿ - 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 2(ಎ) ಎಂದು ಗುರುತಿಸಲಾಯಿತು. ನಿಪಿ - 1 ಮತ್ತು 2 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಸಅ ರವರಿಂದಃ

ದಿಃ 28.03.2018 ರಂದು ಬೆಳಿಗ್ಗೆ 7-30 ಗಂಟೆಗೆ ನಾನು ನನ್ನ ಜಮೀನಿನಲ್ಲಿ ಪಂಪ್ ಸೆಟ್ ಗೆ ಪೈಪ್ ಜೋಡಿಸಿ ಬಂದು ಮಲ್ಲೇಶರವರ ಜಮೀನಿನ ಹತ್ತಿರದ ಓಣಿಯಲ್ಲಿ ನಾನು, ಚಾಸಾ - 2 ರಿಂದ 5 ರವರು ಕುಳಿತು ಮಾತನಾಡುತ್ತಿದ್ದಾಗ 1 ನೇ ಆರೋಪಿಯು ಅಲ್ಲಿಗೆ ಬಂದು ನಮ್ಮ ಮನೆಯ ವಯರ್ ಲೈನಿನ ವಯರನ್ನು ನೀನು ಏಕೆ ಕಿತ್ತು ಹಾಕಿದ್ದೀಯಾ ಎಂದು ಬಾಯಿಗೆ ಬಂದಂತೆ ಬೈದು, ನನ್ನ ಎಡ ಕುತ್ತಿಗೆ ಮತ್ತು ಎಡಕಪಾಳಕ್ಕೆ ಹೊಡೆದನು ಎಂದರೆ ಸರಿಯಲ್ಲ. ನಂತರ ನನ್ನನ್ನು ಅವಾಚ್ಯ ಶಬ್ದಗಳಿಂದ ಬೈಯುತ್ತಾ ಅಲ್ಲಿ ಬಿದ್ದಿದ್ದ ಒಂದು ದೊಣ್ಣೆಯನ್ನು ಎತ್ತಿಕೊಂಡು ನನ್ನ ತಲೆಗೆ 1 ನೇ ಆರೋಪಿಯು ಹೊಡೆದನು ಎಂದರೆ

ಸರಿಯಲ್ಲ. ಅಷ್ಟರಲ್ಲಿ

CC 382/2018, CW-1, PW-1



ಅಲ್ಲಿಗೆ 2 ನೇ ಆರೋಪಿಯು ಬಂದು ನನ್ನನ್ನು ಕೆಳಕ್ಕೆ ಕೆಡವಿ ಕಾಲಿನಿಂದ ನನ್ನ ಎಡ ಸೊಂಟದ ಹತ್ತಿರ ತುಳಿದನು ಎಂದರೆ ಸರಿಯಲ್ಲ. 1 ನೇ ಆರೋಪಿಯ ಚಿಕ್ಕಪ್ಪ 3 ನೇ ಆರೋಪಿಯು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಸ್ಥಳದಲ್ಲಿದ್ದ ಚಾಸಾ - 2 ರಿಂದ 5 ರವರು ಜಗಳ ಬಿಡಿಸಿದರು ಎಂದರೆ ಸರಿಯಲ್ಲ. ಆ ಬಗ್ಗೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಅಲ್ಲಿಯೇ ನಿಪಿ - 1 ರಂತೆ ಹೇಳಿಕೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮಾರನೇ ದಿನ ಪೊಲೀಸರು ಸ್ಥಳಕ್ಕೆ ಬಂದು ನಿಪಿ - 2 ರಂತೆ ಪಂಚನಾಮೆ ಮಾಡಿ ನನಗೆ ಈಗ ತೋರಿಸುತ್ತಿರುವ ದೊಣ್ಣೆಯನ್ನು ವಶಪಡಿಸಿಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ನಾನು ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕಾರಣ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತ ರ ಪರ ಶ್ರೀ ಬಿ.ಎನ್ ವಕೀಲರಿಂದಃ

ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.
ಪಿರಿಯಾಪಟ್ಟಣ